

# ಸಮುದ್ರ ಸೀಳುತ್ತಾ ಸಾಗಿ...

ಮಳೆ ಬರುತ್ತಿರುವಾಗಲೋ ಅಥವಾ ಮಳೆ ಬಂದು ನಿಂತಾಗ ನಮ್ಮಲ್ಲಿರುವ ರಸ್ತೆಗಳ ಮೇಲೆ ವಾಹನ ಚಲಾಯಿಸಿದರೆ, ವಾಹನಗಳ ಜೊತೆ ವಾಹನ ಚಾಲಕರಿಗೂ ನೀರಿನ ಅಭಿಷೇಕ ಮಾಮೂಲು, ಇನ್ನು ಈ ವಾಹನಗಳಿಂದ ಪಾದಚಾರಿಗಳ ಮಾತಂತೂ ಕೇಳುವುದೇ ಬೇಡ ಬಿಡಿ. ಆದರೆ ಇಂಥ ನೀರಿನ ಅಭಿಷೇಕವನ್ನೇನೋ ತಡೆದುಕೊಳ್ಳಬಹುದು. ಅದೇ ವಾಹನ ಚಲಾಯಿಸುವಾಗ ಸಮುದ್ರದ ಅಲೆ ಬಂದು ಬಂದು ನಿಮ್ಮನ್ನು ಅಪ್ಪಳಿಸುತ್ತಿದ್ದರೆ ಹೇಗಿರುತ್ತದೆ?

ಅಬ್ಬಾ! ಕೇಳಿದರೇನೆ ಮೈಯೆಲ್ಲ ಜುಮ್ ಎನಿಸುತ್ತದೆ ಅಲ್ಲವೇ? ಆದರೆ ಅಟ್ಲಾಂಟಿಕ್ ಸಮುದ್ರದ ಹಲವಾರು ಸಣ್ಣ ಸಣ್ಣ ದ್ವೀಪಗಳ ನಡುವೆ ಬಂಧಿಸಲಾಗಿರುವ 'ನಾರ್ವೆ ಬ್ರಿಡ್ಜ್ ರೋಡ್' ಮೇಲೆ ವಾಹನ ಚಲಾಯಿಸುವವರಿಗೆ ಇಂಥ ಅನುಭವ ಸಾಮಾನ್ಯ. ಅದಕ್ಕಾಗಿಯೇ ಇದನ್ನು ವಿಶ್ವದ 'ಥ್ರಿಲ್ ಕ್ರೇಜಿ ಸೇತುವೆಯ ರಸ್ತೆ' ಎಂದು ಕರೆಯಲಾಗುತ್ತದೆ. ಏಕೆಂದರೆ ಅಲ್ಲಿ ಸಾಗುವವರಿಗೆ ಕೇಳಿ ನೋಡಿದರೆ ಸಮುದ್ರ ಸೀಳುತ್ತಾ ಸಾಗುವ ಅನುಭವ ನೀಡುವ ಇಲ್ಲಿಯ ವಾಹನ ಚಾಲನೆ ಒಂದು ರೀತಿಯಲ್ಲಿ 'ಥ್ರಿಲ್' ನೀಡುತ್ತದೆ ಎನ್ನುತ್ತಾರೆ!

ಸಾಮಾನ್ಯ ರಸ್ತೆಯಲ್ಲಿಯೇ ಮೂರ್ನಾಲ್ಕು ತಿರುವುಗಳಿದ್ದರೆ ಉಸ್ಸಪ್ಪಾ ಎನ್ನುತ್ತೇವೆ. ಆದರೆ ಭೋರ್ಗರೆವ ಸಮುದ್ರದ ಮೇಲೆ ಕಟ್ಟಲಾಗಿರುವ ಈ ರಸ್ತೆಯ ಉದ್ದಕ್ಕೂ ತಿರುವುಗಳೇ ಇವೆ, ಜೊತೆಗೆ ಅಸಾಧ್ಯ ಎನ್ನುವಷ್ಟು ಏರು– ತಗ್ಗುಗಳು!

ಅಂದ ಹಾಗೆ, ಈ ರಸ್ತೆಯನ್ನು ಎಂಟು ಸೇತುವೆಯ ಮೇಲೆ ಕಟ್ಟಲಾಗಿದೆ. ಈ ರಸ್ತೆ ನಿರ್ಮಾಣಕ್ಕೆ ಆರು ವರ್ಷ ತಗುಲಿದೆ. ಎಂಟು ಸೇತುವೆಗಳ ಉದ್ದ 891 ಮೀಟರ್ ಆಗಿದ್ದು, ರಸ್ತೆಯ ಉದ್ದ 8274 ಮೀಟರ್, 6.5 ಮೀಟರ್ ಅಗಲ! ಇದರ ನಿರ್ಮಾಣಕ್ಕೆ ತಗುಲಿರುವ ವೆಚ್ಚ 122 ಮಿಲಿಯನ್ ನಾರ್ವೆಯನ್ ಕ್ರೋನ್ (ಸುಮಾರು 108 ಸಾವಿರ ಕೋಟಿ ರೂಪಾಯಿ).

ಈ ಸೇತುವೆ ಟೋಲ್‌ಫ್ರೀಯಾಗಿದೆ. ಎಂದಾದರೊಮ್ಮೆ ನಾರ್ವೆಗೆ ಭೇಟಿ ನೀಡುವ ಸುಯೋಗ ಒದಗಿ ಬಂದರೆ ಎದೆ ಗಟ್ಟಿಯಿದ್ದವರು ಈ 'ಥ್ರಿಲ್' ಪಡೆಯಬಹುದು!

■ ಸಿಂಚನಾ ಎಸ್.ಎನ್



